ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417101

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
Web Site: www.cescmysore. karnataka.gov.in
E-mail ID: gmtech@cescmysore.org

Company Identity Number[CIN]:- U40109KA2004SGC035177

ಕ್ರಮಾಂಕ: ಪ್ರ.ವ್ಯ(ತಾ)/ಉ.ಪ್ರ.ವ್ಯ(ತಾ)/ಸ.ಪ್ರ.ವ್ಯ(ತಾ)-1/2021-22/ cys-31 ದಿನಾಂಕ: 07 APR 2021

## ಸುತ್ತೋಲೆ

**ವಿಷಯ :** ಪತ್ರವ್ಯವಹಾರಗಳು ವಿನಾಕಾರಣ ನಿಗಮ ಕಛೇರಿಗೆ ಮಾಡುತ್ತಿರುವ ಕುರಿತು.

**ಉಲ್ಲೇಖ :** 1. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ : ಪ್ರವ್ಯ(ತಾ)/ಇಇ(ತಾ)/ಸಕಾನಿಇಂ(ತಾ)-2/ ಸಿ1-2098/2014-15/cys-371 ದಿನಾಂಕ : 26.08.2014

2. ಮಾನ್ಯ ನಿರ್ದೇಶಕರು (ತಾಂತ್ರಿಕ) ರವರ ಅನುಮೋದಿತ ಟಿಪ್ಪಣಿ ದಿನಾಂಕ :05.04.2021

*********

ಚಾವಿಸನಿನಿ ನಿಗಮದ ಕೆಲಸ ಕಾರ್ಯಗಳು ಸಕಾಲದಲ್ಲಿ, ವಿಳಂಬ ರಹಿತವಾಗಿ ಕೈಗೊಳ್ಳಬೇಕಾದಲ್ಲಿ ಪತ್ರ ವ್ಯವಹಾರ ನಿಖರ ಹಾಗೂ ಸ್ಪಷ್ಟವಾಗಿ ಇರಬೇಕಾಗಿರುತ್ತದೆ ಮತ್ತು ನಿರ್ದಿಷ್ಟ ಕಛೇರಿಗೆ ವಿಳಾಸಿಸಿರಬೇಕಾಗಿರುತ್ತದೆ, ಆದರೆ ಅನೇಕ ಪತ್ರಗಳು ಅನಾವಶ್ಯಕವಾಗಿ ನಿಗಮ ಕಛೇರಿಗೆ ಬರುತ್ತಿರುತ್ತವೆ ಹಾಗೂ ಇನ್ನು ಹಲವು ನಿಗಮ ಕಛೇರಿಗೆ ಬರುತ್ತಿರುವ ಪತ್ರಗಳು ನಿರ್ದಿಷ್ಟ ಅಧಿಕಾರಿ/ವಿಭಾಗಕ್ಕೆ ವಿಳಾಸಿಸಿರದೆ ಬೇರೆ ಅಧಿಕಾರಿ/ವಿಭಾಗಕ್ಕೆ ವಿಳಾಸಿಸಿ ಬರುತ್ತಿರುತ್ತವೆ. ಪತ್ರಗಳ ಪ್ರತಿಗಳನ್ನು ಅನಾವಶ್ಯಕವಾಗಿ ಸಂಬಂಧ ಪಡದವರಿಗೆ ರವಾನಿಸುವುದರಿಂದ ಲೇಖನ ಸಾಮಾಗ್ರಿಗಳ ದುರ್ಬಳಕೆ ಆಗುವುದಲ್ಲದೆ, ನಿರ್ದಿಷ್ಟ ಅಧಿಕಾರಿ/ಕಛೇರಿಗೆ ವಿಳಾಸಿಸದೇ ಇರುವುದರಿಂದ ಕಛೇರಿ ಕಾರ್ಯನಿರ್ವಹಣೆಯಲ್ಲಿ ವಿನಾಕಾರಣ ಸಮಯ ವ್ಯರ್ಥವಾಗುತ್ತದೆ.

ಮುಂದುವರೆದು, ಕೆಲವು ಅಧಿಕಾರಿಗಳು ಅನೇಕ ಸಂದರ್ಭಗಳಲ್ಲಿ ತಮ್ಮ ವ್ಯಾಪ್ತಿಗೆ ಬರುವ ಮಂಜೂರಾತಿ ಅಧಿಕಾರವನ್ನು ಉಪಯೋಗಿಸದೇ ಅವರ ಮೇಲಿನ ಕಛೇರಿಯ ಅನುಮೋದನೆಯನ್ನು ಕೋರುತ್ತಿರುವುದೂ ಸಹ ನಿಗಮದ ಗಮನಕ್ಕೆ ಬಂದಿರುತ್ತದೆ. ಇದರಿಂದ ಕಛೇರಿಯ ಕಾರ್ಯನಿರ್ವಹಣೆಯಲ್ಲಿ ವಿನಾಕಾರಣ ವಿಳಂಬತೆ ಉಂಟಾಗುತ್ತದೆ. ಅಲ್ಲದೆ ವಿಭಾಗ, ವೃತ್ತಗಳಿಂದ ಅನೇಕ ಪ್ರಸ್ತಾವನೆ, ಬೇಡಿಕೆ ಇತರೆ ಪತ್ರಗಳು ನೇರವಾಗಿ ನಿಗಮ ಕಛೇರಿಗೆ ಬರುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ಮೇಲಾಧಿಕಾರಿಗಳ Recommendation ಇಲ್ಲದಿರುವುದು ಕಂಡುಬಂದಿರುತ್ತದೆ. ಇನ್ನು ಮುಂದೆ ನಿಗಮ ಕಛೇರಿಗೆ ಬರೆಯುವ ಎಲ್ಲಾ ಪತ್ರಗಳು ಮುಖ್ಯ ಇಂಜಿನಿಯರ್ (ವಿ) ರವರ ಮುಖೇನ ಬರತಕ್ಕದ್ದು (ವಿಶೇಷ ಪ್ರಕರಣ ಹೊರತು ಪಡಿಸಿ) ಹಾಗೂ ನೇರವಾಗಿ ನಿಗಮ ಕಛೇರಿಗೆ ಪತ್ರ ಬರೆಯುವವರ ಮೇಲೆ ಶಿಸ್ತಿನಕ್ರಮ ಜರುಗಿಸಬೇಕಾಗುತ್ತದೆ.

ಅದ್ದರಿಂದ, ಅಧಿಕಾರಿಗಳು ಮೇಲಿನ ಎಲ್ಲಾ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಪತ್ರಗಳ ವ್ಯವಹಾರವನ್ನು ಅನಾವಶ್ಯಕವಾಗಿ ಸಂಬಂಧ ಪಡದವರಿಗೆ ರವಾನಿಸದೇ, ನಿರ್ದಿಷ್ಟ ಅಧಿಕಾರಿ/ಕಛೇರಿಗೆ ಸ್ಪಷ್ಟವಾಗಿ ವಿಳಾಸಿಸಿ ಪತ್ರಿಸಕ್ಕದ್ದು ಮತ್ತು ಅಧಿಕಾರ ವ್ಯಾಪ್ತಿಯರಿತು ಅದಕ್ಕನುಗುಣವಾಗಿ ಹಾಗೂ ವಿಳಂಬಕ್ಕೆ ಅಸ್ಪದ ಮಾಡಿಕೊಡದೆ ಕೆಲಸ ನಿರ್ವಹಿಸಬೇಕಾಗಿ ಈ ಮೂಲಕ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

07/4

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

ಪು.ತಿ.ನೋ

ಪ್ರತಿಗಳು :

1. ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ ಹಾಸನ
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ& ಪಾ ವೃತ್ತ , ಚಾವಿಸನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
4. ಆಪ್ತ ಸಹಾಯಕರು ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು ನಿರ್ದೇಶಕರು(ತಾಂತ್ರಿಕ)ಇವರ ಗಮನಕ್ಕೆ ಹಾಗೂ ವಿಷಯವನ್ನು ವ್ಯ.ನಿ/ ನಿ.(.ತಾ) ರವರ ಗಮನಕ್ಕೆ ತರಲು ಸಲ್ಲಿಸಿದೆ.

ಮುಖ್ಯ ಕಡತ/ ಕಛೇರಿ ಪ್ರತಿ